ಅ) ಮಾಲತಿ ನದಿಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಡ್ಯಾಂ ನಿರ್ಮಾಣ ಮಾಡಿ ತುಂಗಾ ಮೇಲ್ದಂಡೆ ಯೋಜನೆಗೆ ಪೂರಕ ಜಲಾಶಯ ನಿರ್ಮಿಸಲು ಸರ್ಕಾರ ಯೋಚಿಸಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಇದುವರೆಗೆ ಕೈಗೊಂಡ ಕ್ರಮಗಳೇನು;

ಇ) ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗುವುದು; ಇದಕ್ಕೆ ಪರಿಸರ ಇಲಾಖೆಯ ಅನುಮತಿ ದೊರೆತಿದೆಯೇ;

ಈ) ಈ ಅಣೆಕಟ್ಟಿನಿಂದ ಆಗುಂಬೆ ಭಾಗದ ನಿತ್ಯ ಹರಿದ್ವರ್ಣ ಕಾಡು ಮುಳುಗಿ ಮಳೆಯ ಮೇಲೆ ದುಷ್ಪರಿಣಾಮವಾಗುವುದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಅಡಿಕೆಗೆ ಬೆಂಬಲ ಬೆಲೆ

118(164) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಅಡಿಕೆ ಧಾರಣೆ ಕುಸಿತದಿಂದ ತೊಂದರೆಗೆ ಒಳಗಾದ ಬೆಳೆಗಾರರಿಗೆ ಬೆಂಬಲ ಬೆಲೆ ನೀಡಲು ಸರ್ಕಾರ ನಿರ್ಧರಿಸಿದೆಯೆ; ಹಾಗಿದ್ದಲ್ಲಿ, ಯಾವಾಗಿನಿಂದ ಆರಂಭಿಸಲಾಗುವುದು;

ಆ) ಬಿಸಲಯ್ಯ ಸಮಿತಿಯ ವರದಿ ಜಾರಿಗೆ ಬಂದಿದೆಯೆ; ಇದರ ಮುಖ್ಯಾಂಶಗಳೇನು;

ಇ) ಬೆಂಬಲ ಬೇಲೆ ನಿರ್ಧಾರವಾಗಿದ್ದಲ್ಲಿ ಕೆಂಪು ಮತ್ತು ಬಿಳಿ ಅಡಿಕೆಗೆ ಯಾವ ಧಾರಣೆ ನಿರ್ಧಾರ ಮಾಡಲಾಗಿದೆ;

ಈ) ಅಡಿಕೆ ಬೆಳೆಯ ಬೆಲೆ ತೀವ್ರವಾಗಿ ಇಳಿಯುತ್ತಿರುವುದನ್ನು ತಪ್ಪಿಸಲು ಪರ್ಯಾಯ ಉಪಾಯ ಹಾಗೂ ಸಂಶೋಧನೆ ನಡೆಸಲು ಸರ್ಕಾರ ಯೋಚಿಸಿದೆಯೆ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಭಾರತ ಸರ್ಕಾರದ ಅನುಮೋದನೆ ದೊರೆತ ನಂತರ ಮಾರುಕಟ್ಟೆ ಮಧ್ಯಪ್ರದೇಶ ಯೋಜನೆಯನ್ನು ಆರಂಭಿಸಲಾಗುತ್ತದೆ.

ಆ) ಡಾ: ಬಿಸಲಯ್ಯ ಸಮಿತಿಯು ಅಡಿಕೆ ಉತ್ಪಾದನೆ ವೆಚ್ಚವನ್ನು ಲೆಕ್ಕಮಾಡಿದ್ದು ಅದರ ಆಧಾರದ ಮೇರೆಗೆ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯನ್ನು ಜಾರಿಗೊಳಿಸಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಅಡಿಕೆ ಚಾಲಿಗೆ ಕರ್ನಾಟಕದಲ್ಲಿ ಪ್ರತಿ ಕಿಲೋಗೆ ರೂ. 65.00 ಉತ್ಪಾದನೆ ವೆಚ್ಚವಾಗಿದೆ ಎಂಬುದು ಪ್ರಮುಖ ಶಿಫಾರಸ್ಸು ಆಗಿರುತ್ತದೆ.

ಇ) ನಿರ್ಧಾರವಾಗಿರುವುದಿಲ್ಲ.

ಈ) ಹೌದು.

ರಾಜ್ಯದ ಸಹಕಾರ ಸಂಘಗಳ ಸಿಬ್ಬಂದಿಗಳ ನೇಮಕಾತಿಗಾಗಿ ಸರ್ಕಾರದ ಅನುಮತಿ

119(165) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಳೆದ ಮೂರು ವರ್ಷಗಳಿಂದ ರಾಜ್ಯದ ಯಾವ ಯಾವ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು ಮತ್ತು ರಾಜ್ಯದಲ್ಲಿರುವ ಸಹಕಾರ ಹಾಲಿನ ಡೈರಿಗಳು ಸಿಬ್ಬಂದಿ ನೇಮಕ ಮಾಡಿಕೊಳ್ಳಲು ಇಲಾಖೆಯ ಅನುಮತಿ ಕೇಳಿಕೊಂಡಿವೆ ಮತ್ತು ಈ ರೀತಿ ಕೇಳಿಕೊಂಡಿರುವ ಸಂಸ್ಥೆಗಳ ಸಂಖ್ಯೆ ಎಷ್ಟು? (ಸಂಸ್ಥೆಗಳವಾರು ವಿವರ ಒದಗಿಸುವುದು)

2) ಈ ರೀತಿ ಹುದ್ದೆ ಭರ್ತಿ ಮಾಡಿಕೊಳ್ಳಲು ಮೇಲ್ಕಂಡ ಎರಡೂ ಸಂಸ್ಥೆಗಳಲ್ಲಿ ಯಾವ ಯಾವುದಕ್ಕೆ ಅನುಮತಿ ನೀಡಲಾಗಿದೆ, ಅನುಮತಿ ಪಡೆದ ಸಹಕಾರಿ ಸಂಸ್ಥೆಗಳು ಯಾವುವು ಮತ್ತು ಪ್ರತಿಯೊಂದಕ್ಕೂ ಯಾವಾವ ಹುದ್ದೆ ಮತ್ತು ಸಂಖ್ಯೆಗಳನ್ನು ಸಂಸ್ಥೆವಾರು ವಿವರ ನೀಡುವುದು.

3) ಸಹಕಾರಿ ಸಂಸ್ಥೆಗಳು ನಷ್ಟದ ದಾರಿ ಹಿಡಿದಿರುವ ಹಾಗೂ ಮಾಹಿತಿ ತಂತ್ರಜ್ಞಾನದ ಯುಗದ ಈ ಕಾಲದಲ್ಲಿ ಈ ರೀತಿ ನೌಕರರನ್ನು ತುಂಬಿಸಿಕೊಳ್ಳುವುದರಿಂದ ಸಂಸ್ಥೆಗಳು ಇನ್ನಷ್ಟು ನಷ್ಟ ಅನುಭವಿಸುವುದಿಲ್ಲವೇ?

4) ಈ ರೀತಿ ಹುದ್ದೆ ಭರ್ತಿ ಮಾಡಿಕೊಳ್ಳುವುದರಲ್ಲಿ ಸಾಕಷ್ಟು ಭ್ರಷ್ಟಾಚಾರಗಳಿಗೆ ಎಡೆಮಾಡಿಕೊಟ್ಟಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

5) ಇದನ್ನು ತಡೆಗಟ್ಟಲು ಮೇಲ್ಕಂಡ ಸಂಸ್ಥೆಗಳಿಗೆ ಅನುಮತಿ ನಿರಾಕರಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

1) ಕಳೆದ ಮೂರು ವರ್ಷಗಳಿಂದ ರಾಜ್ಯದ 10 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸಿಬ್ಬಂದಿ ನೇಮಕ ಮಾಡಿಕೊಳ್ಳಲು ಇಲಾಖೆಯ ಅನುಮತಿ ಕೋರಿದೆ. (ವಿವರಗಳನ್ನು ಅನುಬಂಧ-1 ರಲ್ಲಿ ನಮೂದಿಸಿದೆ)

ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಶಿವಮೊಗ್ಗ, ಕೋಲಾರ, ರಾಯಚೂರು, ಬಳ್ಳಾರಿ ಸಹಕಾರಿ ಹಾಲು ಒಕ್ಕೂಟಗಳು, ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಅನುಮತಿ ಕೇಳಿಕೊಂಡಿರುತ್ತದೆ.

2) ಮಂಡ್ಯ, ಶಿವಮೊಗ್ಗ, ಮೈಸೂರು ಕೆನರಾ, ಬಿಜಾಪುರ, ತುಮಕೂರು, ಚಿತ್ರದುರ್ಗ, ಬೀದರ್, ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಹುದ್ದೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಶಿವಮೊಗ್ಗ ಮತ್ತು ಕೋಲಾರ ಹಾಲು ಒಕ್ಕೂಟಗಳಿಗೆ ಅನುಮತಿ ನೀಡಲಾಗಿದೆ. (ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ).